**ದಿನಾಂಕಃ 04.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರಿಂದಃ**

ಆರೋಪಿ ನಿವೇಶನ ಹಾಗೂ ಕೃಷಿ ಜಮೀನಿನಲ್ಲಿ ಬಂಡವಾಳ ಹೂಡುತ್ತಿದ್ದರು. ನಾನು ಕೃಷಿ ಜಮೀನಿನಲ್ಲಿ ಬಂಡವಾಳ ಹೂಡುವ ಕಾಲಕ್ಕೆ ಒಪ್ಪಂದ ವನ್ನು ನನ್ನ ಹೆಸರಿನಲ್ಲಿ ಮಾಡಿಕೊಳ್ಳಲು ನನಗೇನು ತೊಂದರೆ ಇರಲಿಲ್ಲ , ಆದರೆ ನನ್ನ ಹೆಸರಿನಲ್ಲಿ ಪಹಣಿ ಇರಲಿಲ್ಲ ಕಾರಣ ನಾನು ಆಂದ್ರಪ್ರದೇಶಕ್ಕೆ ಸೇರಿದ್ದು ಆದ್ದರಿಂದ ಆರೋಪಿ ಹೆಸರಿನಲ್ಲಿ ಮಾಡಿದ್ದೆ. ನಿವೇಶನದ ಒಪ್ಪಂದವನ್ನು ಮಾಡುವ ಕಾಲಕ್ಕೆ ಸದರಿ ನಿವೇಶನಗಳನ್ನು ನನ್ನ ಹೆಸರಿಗೆ ನೊಂದಾಯಿಸಲು ನನ್ನ ಆರೋಪಿ ಹೆಸರಿಗೆ ಜಂಟಿಯಾಗಿ ನೊಂದಾಯಿಸಲು ತೊಂದರೆ ಇರಲಿಲ್ಲ.

ನನ್ನ ಆರ್ಥಿಕ ಸಾಮರ್ಥ್ಯ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಾನು ದೂರಿನ 2ನೇ ಖಂಡಿಕೆಯಲ್ಲಿ ನಮೂದಿಸಿರುವ ಆಸ್ತಿಗಳನ್ನು ಹೊರತುಪಡಿಸಿ ರಾಜಾನುಕುಂಟೆ ಸರ್ವೇ ನಂ 256 ನಲ್ಲಿ, ಅಬ್ಬಿಗೆರೆಯಲ್ಲಿ 2 ನಿವೇಶನಗಳಿಗೆ ಬಂಡವಾಳ ಹೂಡಿರುತ್ತೇನೆ. ಸದರಿ ಜಾಗಗಳಲ್ಲಿ ನಾನು ಬಂಡವಾಳ ಹೂಡಿರುವ ಬಗ್ಗೆ ದಾಖಲೆ ಲಭ್ಯವಿಲ್ಲ. ಸದರಿ ಹಣವನ್ನು ಒಡವೆಗಳನ್ನು ಅಡಮಾನಕ್ಕೆ ಇಟ್ಟು ಹಾಗೂ ಸ್ನೇಹಿತರಿಂದ ಸಾಲ ಪಡೆದು ಹೂಡಿರುತ್ತೇನೆ. ಒಡವೆಗಳನ್ನು ಅಡಮಾನಕಿಟ್ಟ ಪತ್ರಗಳು ಹಾಗೂ ಸಾಲ ಕೊಟ್ಟ ಸ್ನೇಹಿತರನ್ನು ಸಾಕ್ಷಿಯಾಗಿ ಕರೆಸಲು ನನಗೇನು ತೊಂದರೆ ಇಲ್ಲ.

2013 ರಿಂದ 2016ಆದಾಯ ತೆರಿಗೆ ಪಾವತಿಸಿದ್ದೇನೆ. ಸದರಿ ಆದಾಯ ತೆರಿಗೆ ವರದಿಯಲ್ಲಿ ನಿವೇಶನ ಹಾಗೂ ಜಮೀನಿನಲ್ಲಿ ಬಂಡವಾಳ ಹೂಡಿದ ಬಗ್ಗೆ ನಮೂದುಮಾಡಿಲ್ಲ ಕಾರಣ ಎಲ್ಲ ವ್ಯವಹಾರವು ನಗದು ರೂಪದಲ್ಲಿ ಮಾಡಿರುತ್ತೇನೆ. 2013 ರಿಂದ 2016 ವರೆಗೂ ಅಷ್ಟು ಹಣ ಹೂಡುವ ಬಗ್ಗೆ ನನಗೆ ಆರ್ಥಿಕ ಸಾಮರ್ಥ್ಯ ಇರಲಿಲ್ಲವೆಂದರೆ ಸರಿಯಲ್ಲ. ಬಂಡವಾಳ ಹೂಡಿರುವ ಬಗ್ಗೆ ಯಾವುದೇ ಒಪ್ಪಂದ ಲಿಖಿತ ರೂಪದಲ್ಲಿ ಆಗಿಲ್ಲ ಕಾರಣ ಆರೋಪಿ ನನ್ನ ಸಂಬಂದಿಕರು ಅವರ ಮೇಲೆ ಇದ್ದ ನಂಬಿಕೆ ವಿಶ್ವಾಸದಿಂದ ಮಾಡಿಕೊಂಡಿಲ್ಲ. ದೂರಿನ 4 ನೇ ಖಂಡಿಕೆಯಲ್ಲಿ ನಮೂದಿಸಿರುವಂತೆ ಕಾಮನ ಫ್ರೆಂಡ್ಸ ಸಾಕ್ಷಿಯಾಗಿ ಕರೆಸಲು ನನಗೇನು ತೊಂದರೆ ಇಲ್ಲ.

ನಿಪಿ.20 ನಾನು ಹಾಗೂ ನನ್ನ ಸಂಗಡಿಗರು ಆರೋಪಿಯಿಂದ ಬಲವಂತವಾಗಿ ಹೆದರಿಸಿ ಅವರ ಸಹಿಪಡೆದಿರುತ್ತೇವೆಂದರೆ ಸರಿಯಲ್ಲ. ಈ ಸಂಬಂದ ಆರೋಪಿ ಬೆಂಗಳೂರು ಸಿಟಿ ಕಮೀಷನರಗೆ ನನ್ನ ವಿರುದ್ದ ಒಂದು ದೂರನ್ನು ನೀಡಿದ್ದು ಅದರಲ್ಲಿ ನನಗೆ ಒಂದು ನೋಟೀಸು ಬಂದಿದ್ದು ನಾನು ಹೇಳಿಕೆ ಕೊಟ್ಟು ಬಂದೆ. ಈ ಕುರಿತು ನೀಡಿರುವ ದೂರನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

ನಾನು ಆರೋಪಿ ಕಚೇರಿಯಲ್ಲಿ ಕೆಲಸ ಮಾಡುವ ಸಂದರ್ಬದಲ್ಲಿ ಅವರ ಗಮನಕ್ಕೆ ಬಾರದೆ ಅವರ ಚೆಕ್ಕುಗಳು ಹಾಗೂ ಕೆಲವು ದಾಖಲೆಗಳನ್ನು ಕಳ್ಳತನ ಮಾಡಿರುತ್ತೇನೆಂದರೆ ಸರಿಯಲ್ಲ. ಈ ಕುರಿತು ಆರೋಪಿ ನನ್ನ ವಿರುದ್ದ ದೂರು ನೀಡಿದ್ದು ಪ್ರ.ವ.ವರದಿ ದಾಖಲಾಗಿತ್ತೆಂದರೆ ಸರಿ. ಸಾಕ್ಷಿಯು ಸದರಿ ದೂರು ಮತ್ತು ಪ್ರ.ವ.ವರದಿ ನೋಡಿ ಗುರುತಿಸಿದ್ದು ಅದನ್ನು ನಿಡಿ-2 ಮತ್ತು ನಿಡಿ-3 ಎಂದು ಗುರುತಿಸಲಾಯಿತು.

ಆರೋಪಿ ಎಂದಿಗೂ ನಿಪಿ.20 ರಂತೆ ಒಪ್ಪಂದ ನನ್ನೊಂದಿಗೆ ಮಾಡಿಕೊಂಡಿಲ್ಲವೆಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನಮೂದಿಸಿರುವಂತೆ ಯಾವುದೇ ಸಬೆ ನಡೆದಿಲ್ಲವೆಂದರೆ ಸರಿಯಲ್ಲ. ನಾನು ಆರೋಪಿ ಕಚೇರಿಯಿಂದ ಕದ್ದ ಚೆಕ್ಕಿನ ಆಧಾರದ ಮೇಲೆ ಪ್ರಸ್ತುತ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ನಿಪಿ1ರಲ್ಲಿರುವ ಸಹಿ ಆರೋಪಿಯದ್ದಲ್ಲವೆಂದರೆ ನನಗೆ ಗೊತ್ತಿಲ್ಲ, ಸದರಿ ಚೆಕ್ಕನ್ನು ಆರೋಪಿ ಭರ್ತಿ ಮಾಡಿ ನನಗೆ ತಂದುಕೊಟ್ಟರು. ನಿಪಿ1ರಲ್ಲಿ ಆರೋಪಿ ಸಹಿ ನಾನೇ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ.

ಕಮಲ ಸಿಂಗ ನನಗೆ 1990 ರಿಂದ ಪರಿಚಯ, ನಾವಿಬ್ಬರುಸೈನ್ಯದಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೇವು. ಅವರ ಮೂಲಕ ಪ್ರಸ್ತುತ ಆರೋಪಿ ವಿರುದ್ದ ಒಂದು ಮತ್ತೊಂದು ಚೆಕ್ಕು ಪ್ರಕರಣವನ್ನು ಹಿಸ್ಸಾರ್, ಹರಿಯಾಣದಲ್ಲಿ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡುವ ಬಾದ್ಯತೆ ಇಲ್ಲವೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

(ಓ.ಹೇ.ಕೇ.ಸ.,)

**18ನೇ ಎ.ಸಿ.ಜೆ .ಎಂ.,**
**ಬೆಂಗಳೂರು.**